33

# "ಬಿತ್ತುವವನ ಸಾಮ್ಯವನ್ನು ಕೇಳಿರಿ"

## ಮತ್ತಾಯ 13:3-10, 18-23; ಮಾರ್ಕ 4:2-10, 13-20; ಲೂಕ 8:4-9, 11-15, ಒಂದು ನಿಕಟ ನೋಟ


ನಾನು ಹೆಚ್ಚು ಪ್ರಸಂಗಿಸುವಾಗ, ನನ್ನ ಕೇಳುಗರು ಅದರಲ್ಲಿರುವ ಪರಿಣಾಮವನ್ನು ಅರ್ಥಮಾಡಿಕೊಳ್ಳುತ್ತಾರೆ. ಒಂದು ಸ್ಥಳದಲ್ಲಿ ಆ ಪ್ರಸಂಗವನ್ನು ಮಾಡಿದಾಗ ಅಲ್ಲಿರುವ ಜನರು ಅದನ್ನು ಮಹತ್ವವಾದದ್ದು ಎಂದು ತಿಳಿದರು, ಮತ್ತೊಂದು ಪ್ರದೇಶದ ಜನರು ಅದನ್ನು ಅರ್ಥಹೀನ ಎಂದು ಹೇಳಬಹುದು. ಒಂದು ಸ್ಥಳದಲ್ಲಿ ಪ್ರಸಂಗವು ಅನೇಕರನ್ನು ಸ್ಪರ್ಶಿಸಿದರೆ, ಇನ್ನೊಂದು ಸ್ಥಳದಲ್ಲಿ ಅದರ ಪರಿಣಾಮವನ್ನು ಕಾಣದೆ ಹೋಗಬಹುದು. ನಾನು ಒಂದೇ ಪ್ರಸಂಗವನ್ನು ಎಲ್ಲಾ ಕಡೆಗಳಲ್ಲಿ ಮಾಡಿದ್ದರು, ವ್ಯತ್ಯಾಸವು ಕೇಳುಗರಲ್ಲಿ ಇರುವದು ಖಂಡಿತ ವಾಗಿರುತ್ತದೆ. ಯೇಸು ಬೋಧಿಸಿದ ಒಂದು ಸಾಮ್ಯವು ಜನರ ಹೃದಯದಲ್ಲಿ ಸುವಾರ್ತೆಯ ಯಶಸ್ಸನ್ನು ತಂದಿತು.[1]

### ಸಾಮ್ಯ (ಮತ್ತಾಯ 13:3-9; ಮಾರ್ಕ 4:2-9; ಲೂಕ 8:4-8)

"ಇಗೋ ಬಿತ್ತುವವನು ಬಿತ್ತುವದಕ್ಕೆ ಹೊರಟನು" ಎಂದು ಯೇಸು ಆರಂಭಿಸಿದನು (ಮತ್ತಾಯ 13:3ಬಿ).

**ದಾರಿಯ ಮಗ್ಗುಲು[2]: ಕಠಿಣವಾದ ಭೂಮಿ**

"ಅವನು ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗಲಲ್ಲಿ ಬಿದ್ದವು" (ಮತ್ತಾಯ 13:4ಎ). ಆ ದಿನಗಳಲ್ಲಿ ಪಾಲಿಸ್ತೇನಿನ ಹೊಲಗಳ ಮಧ್ಯದಲ್ಲಿ ಬೇಲಿಗಳು ಇರುತ್ತಿರಲಿಲ್ಲ, ದಾರಿಗಳು ಹೊಲದ ಮಧ್ಯದಲ್ಲಿ ಹಾದುಹೋಗುತ್ತಿದ್ದವು. ಈ ಕಾಲಿನ ದಾರಿಗಳು ಬಲು ಗಟ್ಟಿಯಾಗಿರುತ್ತಿದ್ದವು, ಯಾಕಂದರೆ ಅನೇಕ ಜನರು ಆ ಹಾದಿಯಲ್ಲಿ ಹಾದು ಹೋಗುತ್ತಿದ್ದರು. ಆದ್ದರಿಂದ ಬೀಜವು ಆ ಭೂಮಿಯಲ್ಲಿ ಬೆಳೆಯಲಿಲ್ಲ, ಅದು ಹಾಗೆ ಭೂಮಿಯ ಮೇಲಿತ್ತು. "ಅದು ತುಳಿಯಲ್ಪಟ್ಟವು ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅವುಗಳನ್ನು ತಿಂದು ಬಿಟ್ಟವು" (ಲೂಕ 8:5ಬಿ).[3]



**ಬಂಡೆಯ ನೆಲ: ಮಣ್ಣು ತೆಳ್ಳಗಿದ್ದ ಸ್ಥಳ**

"ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದ ಮೇಲೆ ಬಿದ್ದವು" (ಮತ್ತಾಯ 13:5ಎ). ತೆಳ್ಳಗಿರುವ ಮಣ್ಣಿನ ಕೆಳಗೆ ಬಂಡೆಯಿತ್ತು.[4] ಬೆಟ್ಟದ ಪ್ರದೇಶಗಳಂತೆ, ಪಾಲಿಸ್ತೇನಿನ ಭೂಮಿಯು ಸಹ ಬಂಡೆಗಳನ್ನು ಹೊಂದಿತ್ತು. ಅದು ಸಹ ದಾರಿ ಮಗ್ಗಲಿನ ಭೂಮಿಯಂತೆ ಗಟ್ಟಿಯಾಗಿತ್ತು,ಆದರೆ ಅದು ಫಲವತ್ತಾದ ನೆಲದಂತೆ ಕಾಣುತ್ತಿತ್ತು.

"ಇಂಥಹ ನೆಲದಲ್ಲಿ ಬಿದ್ದ ಬೀಜ ನೆಲದ ಸ್ವಲ್ಪದೂರ ಮಾತ್ರ ಹಾದುಹೋಗಿತ್ತು ಮತ್ತು ಬೇಗನೆ ಬೆಳೆಯಲು ಆರಂಭಿಸಿತು" (ವಚನ 5ಬಿ), ಅಲ್ಲಿ ಮಣ್ಣು ತೆಳ್ಳಗಿದ್ದರಿಂದ ಬೇರು ಆಳವಾಗಿ ಇಳಿಯಲು ಸಾಧ್ಯವಾಗಲಿಲ್ಲ. "ಅವು ಬೇಗನೆ ಮೊಳೆತವು; ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿ ಹೋದವು" (ಲೂಕ 8:6; ಮತ್ತಾಯ 13:6).



**ಮುಳ್ಳಿನ ನೆಲ – ವಿಭಜನೆ**

"ಮತ್ತೆ [ಕೆಲವು ಬೀಜ] ಮುಳ್ಳುಗಿಡಗಳಲ್ಲಿ ಬಿದ್ದವು" (ಮತ್ತಾಯ 13:7ಎ), ಅದು ಒಳ್ಳೆಯದಾಗಿತ್ತು, ಉತ್ತಮ ನೆಲವಾಗಿತ್ತು, ಆದಾಗ್ಯೂ ಈಗಾಗಲೇ ಮುಳ್ಳುಗಳು ಆ ನೆಲವನ್ನು ಆಕ್ರಮಿಸಿದ್ದವು. ಮೆಕ್ ಗಾರ್ವೆಯವರ ಪ್ರಕಾರ "ಪಾಲೆಸ್ತೇನಿನಲ್ಲಿ, ಹದಿನಾರು ವಿಧಗಳ ಮುಳ್ಳುಗಳಿವೆ, ಅವುಗಳು ಬಹಳ ಒತ್ತಾಗಿ ಬೆಳೆಯುವದರಿಂದ, ಕುದುರೆ ಮೇಲೆ ಕುಳಿತಿರುವ ಒಬ್ಬ ವ್ಯಕ್ತಿಯು ಅದರ ಮಧ್ಯದಲ್ಲಿ ಆಯ್ದು ಹೋಗಿಲಾರನು."[5]

ಆ ನೆಲವು ಫಲವತ್ತಾಗಿ ಕಾಣಿಸಿತು ಏಕೆಂದರೆ, ಮುಳ್ಳಿನ ಕೊನೆಗಳು ಕತ್ತರಿಸಲ್ಪಟ್ಟವು, ಅವುಗಳ ಬೇರುಗಳು ನೆಲದ ಬಳಿಗೆ ಇದ್ದವು. ನಾನು ಚಿಕ್ಕವನಿರುವಾಗ ನನ್ನ ತಂದೆಯು ತೋಟದ ಕೆಲಸವನ್ನು ನನಗೆ ನೀಡಲೂ, ನಾನು ನೆಲದ ಮೇಲಿನ ಕಳೆಗಳನ್ನು ಕರೆದಿಡುತ್ತಿದೆ; ಆದ್ದರಿಂದ ತೋಟವು ಸ್ವಚ್ಛವಾಗಿ ಕಂಡರೂ, ನನ್ನ ಕೆಲಸವನ್ನು ಮಾಡಿ ಮುಗಿಸಿದರೂ, ನಾನು ಪುನಃ ಯಥಾರ್ಥವಾದ ಕೆಲಸವನ್ನು ಮಾಡಲೇಬೇಕಿತ್ತು!

ಈ ಬೀಜವು ಈ ನೆಲದಲ್ಲಿ ಬೆಳೆದು ಬೇರು ಬಿಟ್ಟಿತು; "ಆದರೆ ಮುಳ್ಳು ಸಹ ಅದರ ಸಂಗಡ ಬೆಳೆಯಿತು" (ಲೂಕ 8:7). ಇದರ ಪರಿಣಾಮವಾಗಿ "ಮುಳ್ಳುಗಳು ಆ ಗಿಡಗಳನ್ನು ಅಡಗಿಸಿಟ್ಟವು" (ಸಣ್ಣ ಸಸಿಗಳನ್ನು) (ಮತ್ತಾಯ 13:7ಬಿ). ಒಂದು ಸಾರಿ ನಾನು ಮರೆತು ಹೋಗಿದ್ದ ಒಂದು ಸಂಪನ್ಮೂಲದಿಂದ ಈ ಸತ್ಯಗಳನ್ನು ಬರೆದಿಟ್ಟುಕೊಂಡಿದ್ದೆ: "ಭೂಮಿಯು ಕೆಲವು ವಿಧವಾದ ಸಸ್ಯಗಳಿಗೆ ಆಧಾರವಾಗಿರುತ್ತದೆ, ಜೀವವಿರುವ ಪ್ರತಿಯೊಂದು ಕಳೆಗಳು ತೆನೆ ಕತ್ತರಿಸುವ ಕತ್ತಿಯಂತಿರುತ್ತದೆ." ಮುಳ್ಳುಗಳು ಗಿಡಗಳನ್ನು ಕೊಂದು ಹಾಕಲಿಲ್ಲ, ಬಂಡೆಯ ನೆಲದಲ್ಲಿ ಸಂಭವಿಸಿದ ಕಾರ್ಯವೇ ಇದಕ್ಕೂ ಉಂಟಾಯಿತು. ಗಿಡಗಳು ಬೆಳೆದರೂ ಅವು ಕುಗ್ಗಿ ಹೋಗಿದ್ದವು. ಅವು ತೆನೆ ಬಿಟ್ಟರೂ,[6] ಖಾಲಿಯಾಗಿದ್ದವ. "ಅವು ಫಲಕೊಡಲಿಲ್ಲ" (ಮಾರ್ಕ 4:7).

**ಉತ್ತಮವಾದ ನೆಲ: ಮೃದು, ಆಳ, ಹಾಗೂ ಸ್ವಚ್ಛ**

"ಇನ್ನು ಕೆಲವು ಒಳ್ಳೆಯ ನೆಲದಲ್ಲಿ ಬಿದ್ದವು" (ಮತ್ತಾಯ 13:8ಎ). ಇದು ಬೀಜವನ್ನು ಸ್ವೀಕರಿಸಲು, ಹಸನು ಮಾಡಿ ಸಿದ್ಧವಾದ ನೆಲ. ಇತರೆ ನೆಲಕ್ಕೆ ವಿರುದ್ಧವಾಗಿತ್ತು. ರಸ್ತೆಯ ಬದಿಯ ನೆಲ ಕಠಿಣವಾಗಿದ್ದರೆ, ಈ ನೆಲ ಮೃದುವಾಗಿತ್ತು. ಬಂಡೆಯ ನೆಲ ತೆಳುವಾಗಿದ್ದರೆ, ಈ ನೆಲವು ಆಳವಾಗಿತ್ತು. ಮುಳ್ಳಿನ ನೆಲ, ಮುಳ್ಳಿನಿಂದ ತುಂಬಿದ್ದರೆ, ಈ ನೆಲವು ಸ್ವಚ್ಛ ವಾಗಿತ್ತು, ಇಲ್ಲಿ ಬೀಜವು ಅಡೆತಡೆಯಿಲ್ಲದೆ ಸುಗಮವಾಗಿ ಬೆಳೆಯಿತು. ಅದರ ಪರಿಣಾಮವೇನಾಯಿತು? "ಅದು ನೂರರಷ್ಟು ಅರವತ್ತರಷ್ಟು, ಹಾಗೂ ಮೂವತ್ತರಷ್ಟು ಫಲವನ್ನು ಕೊಟ್ಟವು" (ವಚನ 8ಬಿ).




ಯೇಸು ಸಾಮ್ಯವನ್ನು ಹೇಳಿದ ನಂತರ, "ಕಿವಿಯುಳ್ಳವನು ಕೇಳಲಿ" (ವಚನ 9) ಅಂದನು. ಇದು ಕೇಳಿ ಬಿಟ್ಟುಬಿಡುವಂಥ ಕಥೆಯಲ್ಲ. ಅದರ ಅರ್ಥವನ್ನು ಅವರು ಅರಿಯ ಬೇಕೆಂದು ಯೇಸು ಬಯಸಿದನು.

## ಅಳವಡಿಸಿಕೊಳ್ಳುವದು

## (ಮತ್ತಾಯ 13:10, 18-23; ಮಾರ್ಕ 4:10, 13-20; ಲೂಕ 8:9, 11-15)

ತರುವಾಯ ಆತನ ಶಿಷ್ಯರು ಬಂದು - ಯಾಕೆ ಸಾಮ್ಯರೂಪವಾಗಿ ಅವರ ಸಂಗಡ ಮಾತಾಡುತ್ತೀ ಎಂದು ಕೇಳಿದರು (ಮತ್ತಾಯ 13:10). ಇದರ ಅರ್ಥವೇನು (ಲೂಕ 8:9). ಯೇಸು ಅವರಿಗೆ "ಬಿತ್ತುವವನ ಸಾಮ್ಯದ ಅರ್ಥವನ್ನು ಕೇಳಿರಿ" ಅಂದನು (ಮತ್ತಾಯ 13:18).

ಈ ನೆಲದ ವಿವರಣೆಯನ್ನು ಪಡೆಯುವ ಮುನ್ನ, ಬೀಜ, ಬಿತ್ತುವವನ ಹಾಗೂ ಆ ಭೂಮಿಯ ಕುರಿತ ಪ್ರಾಮುಖ್ಯತೆಯನ್ನು ಅರಿಯಬೇಕು. ಮೊದಲನೆಯದಾಗಿ ಬೀಜದ ಕುರಿತು ಈ ಸಾಮ್ಯವೇನೆಂದರೆ; "ಬೀಜ ಅಂದರೆ ದೇವರ ವಾಕ್ಯ" (ಲೂಕ 8:11). "ಬಿತ್ತುವವನು ವಾಕ್ಯವನ್ನು ಬಿತ್ತುತ್ತಾನೆ" (ಮಾರ್ಕ 4:14). "ಬೀಜ ಅಂದರೆ ನಾಶವಾಗದ ದೇವರ ವಾಕ್ಯ" (1 ಪೇತ್ರ 1:23), ಬಿತ್ತುವವನು ಅಂದರೆ ದೇವರ ವಾಕ್ಯಸಾರುವವನು - ಉಪದೇಶಕ ಅಥವಾ ಪ್ರಸಂಗಿ, ಪೌಲನು ತನ್ನ ಪ್ರಸಂಗದ ಕುರಿತು, "ನಾನು ಸಸಿಯನ್ನು ನೆಟ್ಟೆನು" (1 ಕೊರಿಂಥ 3:6ಎ). *ಭೂಮಿ* ಅಂದರೇನು? ಮನುಷ್ಯನ ಹೃದಯ ಹಾಗೂ ಮನಸ್ಸು ಭೂಮಿಯಾಗಿದೆ. ಮನಸ್ಸು ದೇವರ ವಾಕ್ಯವನ್ನು ಗ್ರಹಿಸುವ ಸಾಮರ್ಥ್ಯ ಹೊಂದಿದೆ. ಯೇಸು ಇದನ್ನು ಕುರಿತು, "ವಾಕ್ಯವನ್ನು ಕೇಳಿ ಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಳ್ಳುವದು" ಒಳ್ಳೆಯ ನೆಲವಾಗಿದೆ (ಲೂಕ 8:15).



ಸಾಮ್ಯದ ಸಾರಾಂಶ ಇಲ್ಲಿದೆ: ಬಿತ್ತುವವನು ಹಾಗೂ ಬೀಜ ಎರಡು ವಿಧದಲ್ಲೂ ಒಂದೇ ಆಗಿದೆ, ಆದರೆ ಭೂಮಿಯು ವ್ಯತಾಯವುಳ್ಳದ್ದಾಗಿದೆ.[7] ಆ ನೆಲಗಳು ವಿಧವಿಧವಾಗಿ ಬೀಜವನ್ನು ಸ್ವೀಕರಿಸಿದವು. ಈ ಸಾಮ್ಯವು ನಮ್ಮೊಂದಿಗೆ ಮಾತಾಡಬೇಕು. "ನನ್ನ ಹೃದಯದ ಸ್ಥಿತಿ ಹೇಗಿದೆ? ನಾನು ಯಾವ ರೀತಿಯಲ್ಲಿ ವಾಕ್ಯವನ್ನು ಸ್ವೀಕರಿಸುತ್ತೇನೆ?"

ಹೃದಯವೆಂಬ ನೆಲದ ಬಗ್ಗೆ ಯೇಸು ತಿಳಿಸಿದ ಅರ್ಥವನ್ನು ಗಮನಿಸೋಣ.

**ದಾರಿಯ ಬದಿಯಲ್ಲಿ: ಕಠಿಣವಾದ ಹೃದಯ**

ದಾರಿಯ ಬದಿಯಲ್ಲಿರುವ ನೆಲವು *ಕಠಿಣವಾದ ಹೃದಯಕ್ಕೆ* ಹೋಲಿಕೆಯಾಗಿದೆ. "ಭಿನ್ನಾಭಿಪ್ರಾಯ ಹಾಗೂ ಸ್ವಾರ್ಥದಿಂದ ತುಳಿಯಲ್ಪಟ್ಟು ಕಠಿಣವಾಗಿದೆ, ಮೋಸಕರವಾದ ಪಾಪದಿಂದ ಕಠಿಣವಾಗಿದೆ" (ಇಬ್ರಿಯ 3:13). ನೀವು ಜನರಿಗೆ ಉಪದೇಶಿಸಬೇಕೆಂದಿದ್ದಲ್ಲಿ, ಪ್ರಾಯಶ ಸುವಾರ್ತೆಯಲ್ಲಿ ಆಸಕ್ತಿ ಇಲ್ಲದವರನ್ನು ಸಂಧಿಸಿರಬಹುದು. ಈ ವಿಧವಾದ ವ್ಯಕ್ತಿಯನ್ನು ಕುರಿತು ಪೌಲನು ಮಾತನಾಡಿ: "ಪ್ರಾಕೃತಿ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ" (1 ಕೊರಿಂಥ 2:14). ಅವು ಅವನಿಗೆ ಹುಚ್ಚು ಮಾತಾಗಿ ಕಾಣಿಸುತ್ತದೆ. ಅವು ಆತ್ಮ ವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. "ಅವರು ಸತ್ಯದ ಮೇಲೆ ಪ್ರೀತಿಯನ್ನು ಇಟ್ಟಿರುವದಿಲ್ಲ" (2 ಥೆಸಲೋನಿಕ 2:10). ದೇವರ ವಾಕ್ಯದ ಬೀಜವು ಅವರ ಹೃದಯದಲ್ಲಿ ನಿಲ್ಲುವದಿಲ್ಲ.

ಆದ್ದರಿಂದ ಯೇಸು ತಿಳಿಸಿರುವದೇನೆಂದರೆ, "ಯಾವನಾದರೂ ಪರಲೋಕ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನನ್ನು ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದು ಹಾಕುತ್ತಾನೆ; ಈ ಮನುಷ್ಯನೇ ಬೀಜ ಬಿದ್ದ ದಾರಿ ಮಗ್ಗುಲಾಗಿರುವನು" (ಮತ್ತಾಯ 13:19). ದಾರಿಯ ಮಗ್ಗಲಲ್ಲಿ ಬಿದ್ದ ಬೀಜವನ್ನು ಪಕ್ಷಿಗಳು ತಿಂದುಬಿಟ್ಟ ಹಾಗೆ, ಸೈತಾನನು ವಾಕ್ಯವನ್ನು ಕಠಿಣ ಹೃದಯಿಂದ ಕಿತ್ತು ಹಾಕುವನು. ಹೇಗೆ? ತಕ್ಷಣವೇ ಅವನ ಮನಸ್ಸಿನಲ್ಲಿ ಸಾವಿರಾರು ಆಲೋಚನೆಗಳು ಬಂದು ಸೇರುತ್ತವೆ, ಇದು ಸರಳವಾದ ಕಾರಣವಾಗಿದೆ. ಸೈತಾನನು ಏಕೆ ಇದನ್ನು ಮಾಡುತ್ತಾನೆ? "... ತಕ್ಷಣವೇ ಅವರು ನಂಬುತ್ತಾರೆ" ಎಂಬ ಕಾರಣಣದಿಂದ (ಲೂಕ 8:12). ದೇವರ ವಾಕ್ಯದಿಂದ ನಂಬಿಕೆ ಹುಟ್ಟುತ್ತದೆ (ರೋಮಾಪುರ 10:17), ಜನರು ವಾಕ್ಯವನ್ನು ಕೇಳಿ ನಂಬಬಾರದೆಂದು ಸೈತಾನನು ಬಯಸುತ್ತಾನೆ. ಸಾಧ್ಯವಾದಷ್ಟು ಜನರು ನರಕಕ್ಕೆ ಬರಬೇಕೆಂದು ಬಯಸುತ್ತಾನೆ.

ಈ ವಾಕ್ಯಗಳನ್ನು ಓದಿದ ನಂತರವು ಈ ವಿಧವಾದ ಹೃದಯವನ್ನು ಹೊಂದುವ ಸಾಧ್ಯತೆ ಇದೆಯೇ? ವಾಕ್ಯವನ್ನು ಹೊಂದುವಲ್ಲಿ ಹೃದಯವನ್ನು ಕಠಿಣಪಡಿಸಿಕೊಳ್ಳ ಬಹುದೇ? "ಈ ದಿನ ಆತನ ಸ್ವರವನ್ನು ಕೇಳಿ, ಹೃದಯವನ್ನು ಕಠಿಣಮಾಡಿಕೊಳ್ಳ ಬೇಡ ಎಂದು ಸತ್ಯವೇದ

ಮನವಿ ಮಾಡುತ್ತದೆ'' (ಇಬ್ರಿಯ 4:7ಬಿ). ಅದರ ಬದಲಾಗಿ, ''ಮನಸ್ಸಿನಲ್ಲಿ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಕೊಡಿರಿ'' (ಯಾಕೋಬ 1:21) ಬೀಜವನ್ನು ಕಳಕೊಂಡರೆ, ಜೀವವನ್ನೇ ಕಳಕೊಂಡಂತೆ ... ಆತ್ಮೀಕ ಜೀವನವು ಬೀಜದಲ್ಲಿದೆ!

**ಬಂಡೆಯ ನೆಲ: ತೆಳುವಾದ ಹೃದಯ**

ನಂತರ ಯೇಸು ಬಂಡೆಯ ನೆಲದ ಅರ್ಥವನ್ನು ಹೇಳಿದನು: ''ಒಬ್ಬನು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ'' (ಮತ್ತಾಯ 13:20). ಸಂಕುಚಿತ ಮನೋಭಾವದವರು, ಹೆಮ್ಮೆಯ ಮನಸ್ಸಿನವರು, ತೆಳುವಾದ ಹೃದಯಿಗಳಾಗಿದ್ದಾರೆ: ಅವನು ಸತ್ಯವನ್ನು ಸ್ವಿಕರಿಸಿ, ಬೇಗನೇ ಸುವಾರ್ತೆಯನ್ನು ನಂಬಿ, ಸಂತೋಷಪಡುವಂತೆ ಮಾಡಿ, ಬೇಗನೆ ಕ್ರೈಸ್ತರಾದೆವು ಎಂದು ಹಿಗ್ಗುತ್ತಾರೆ: ''ಆದರೆ ಅವನು ಬೇಗನೆ ಆಸಕ್ತಿಯನ್ನು ಕಳಕೊಳ್ಳುತ್ತಾನೆ, ಅಂಥವರ ಬಗ್ಗೆ ನಮ್ಮ ಹೃದಯಗಳು ಮುರಿದು ಹೋಗುತ್ತೇವೆ!'' ಇಂಥಹ ಜನರನ್ನು ನಾವು ಸಂಧಿಸಿರುವದಿಲ್ಲವೇ ಮಣ್ಣು ತೆಳ್ಳಗಿದ್ದರಿಂದ ಬೀಜಬೇಗನೆ ಬೆಳೆಯಿತು, ಇವರು ಈ ರೀತಿ ಇದ್ದಾರೆ. ಏನೇ ಕಾರಣವಿದ್ದರೂ, ಇಂಥವನು ಸತ್ಯದಲ್ಲಿ ಆಳವಾಗಿ ಬೇರೂರಲಿಲ್ಲ,[8] ಕ್ರೈಸ್ತರ ಅರ್ಥವನ್ನು ಅರಿಯುವಲ್ಲಿ ಯಶಸ್ವಿಯಾಗಲಿಲ್ಲ.

ಯೇಸುವಿನ ಪ್ರಕಾರ, ಅಂಥವನಿಗೆ, ''ಇವನಿಗೆ ಬೇರಿಲ್ಲದ ಕಾರಣ ಇವನು ಸ್ವಲ್ಪ ಕಾಲ ಮಾತ್ರವೇ'' (ಮತ್ತಾಯ 13:21ಎ) KJVಯಲ್ಲಿ, ''ಸ್ವಲ್ಪಕಾಲ ಮಾತ್ರ ತಾಳಿಕೊಂಡನು, ಮೊದಲಿನ ನೆಲದ ಸ್ವಾಭಾವಕ್ಕಿಂತಲು ಇವನು ವಿಭಿನ್ನವಾಗಿರುವನು, ಅವನು ಅಂತ್ಯದವರೆಗೆ ತಾಳಿಕೊಳ್ಳುವದಿಲ್ಲ'' (ಮತ್ತಾಯ 10:22). ಅಂತ್ಯದ ಪರಿಣಾಮ ಒಂದೇ: ''... ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲೀ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುವನು'' (ಮತ್ತಾಯ 13:21). ತೆಳುವಾದ ನೆಲದ ಮೇಲಿರುವ ಗಿಡವು ಸೂರ್ಯನ ಶಾಖದ ನಿಮಿತ್ತ ಬೇಗನೆ ಒಣಗಿ ಹೋಗುವ ಪ್ರಕಾರ, ಹಿಂಸೆ ಸಂಕಟ ಬರುವಾಗ ಸೋತು ಹೋಗುತ್ತಾನೆ ಅಳವಾಗಿ ಬೇರು ಬಿಟ್ಟ ಗಿಡವನ್ನು ಸೂರ್ಯನು ಬಲಪಡಿಸಿದರೆ ತೆಳುವಾದ ನೆಲದಗಿಡವನ್ನು ಬಲಹೀನ ಮಾಡುವಂತೆ, ಹಿಂಸೆಯಿಂದ ಒಬ್ಬ ಕ್ರೈಸನು ಬಲವುಳ್ಳವನಾದರೆ[9] ಕಪಟಿಯಾದ ಶಿಷ್ಯನು ಸೋಲುತ್ತಾನೆ.[10]

ಸಾಮ್ಯದಲ್ಲಿರುವ ''ತಕ್ಷಣವೇ'' ಎಂಬ ಪದವನ್ನು ಗಮನಿಸಿರಿ: ಅವನು ವಾಕ್ಯವನ್ನು ಸಂತೋಷದಿಂದ ಸ್ವೀಕರಿಸಿದನು, ಆದರೆ ಸಂಕಟಗಳು ಬಂದ *''ತಕ್ಷಣ''* ಎಡವಿ ಬಿದ್ದನು. ಶಿಲುಬೆಯ ನಂತರ ಕೀರಿಟವು ದೊರಕುತ್ತಿದ್ದರಿಂದ, *''ತಕ್ಷಣವೇ''* ಅವನು ಶಿಲುಬೆಯನ್ನು ತಪ್ಪಿಸಿಕೊಳ್ಳಲು, ಕಿರೀಟವನ್ನು ತ್ಯಾಗಮಾಡಿದನು.

ಈ ವಿಚಾರವು ನಿಮ್ಮ ಕುರಿತಾಗಿ ವಿವರಣೆ ನೀಡುತ್ತಿಲ್ಲವೆಂದು ನಾನು ನೆನಸುತ್ತೇನೆ. ನಿಮಗೆ ಬರುವ ಸಂಕಟಗಳನ್ನು ಹೇಗೆ ಎದುರಿಸುವಿರಿ ಎಂಬುದರ ಮೇಲೆ ''ಎಷ್ಟು ಆಳವಾಗಿ ಬೇರು ಬಿಟ್ಟಿರುವಿರಿ'' ಎಂಬುದು ಅವಲಂಭಿತವಾಗಿದೆ. ಇಂಥಹ ವಿಧದ ಕ್ರೈಸ್ತನು ಇತರ ಕ್ರೈಸ್ತರಂತೆ ''ಆರೋಗ್ಯವಾಗಿ'' ಕಾಣಿಸಿದರೂ, ಅವನ ಜೀವಿತವು ಕಠಿಣವಾಗುವವರೆಗೆ ಆ ರೀತಿ ಇರುತ್ತಾನೆ, ಅಂತಹ ಸಮಯದಲ್ಲಿ ಅವನು ವಿಧೇಯತೆಯ ಬದಲು, ಅವಿಧೇಯತೆ ತೋರುತ್ತಾನೆ:

- ಬೈಬಲ್ ಅಧ್ಯಯನಕ್ಕೆ ತೋರುತ್ತಾನೆ.
- ಬೈಬಲ್ ಅಧ್ಯಯನಕ್ಕೆ ಹೋಗುವದಕ್ಕಿಂತಲೂ, ಹಾಸಿಗೆಯಲ್ಲಿ ಇರುವದನ್ನೇ ಬಯಸುತ್ತಾನೆ.
- ಆರಾಧನೆಗಿಂತ, ಮೀನು ಹಿಡಿಯುವದೇ ಅವನಿಗೆ ಆಸಕ್ತಿ.
- ಸುವಾರ್ತೆಯ ವಿಚಾರಕ್ಕಿಂತ ಮೌನವಾಗಿರುವದನ್ನು ಬಯಸುತ್ತಾನೆ.

- ಲೋಕಕಕ್ಕೆ ಬೆಳಕಾಗಿರುವ ಬದಲು, ಲೋಕದೊಂದಿಗೆ ಇಡುಜೋಡಾಗುತ್ತಾನೆ. ಸತ್ಯಕ್ಕೆ ಬದಲಾಗಿ, ಸುಳ್ಳನ್ನು ಹಿಂಬಾಲಿಸುವುದು ಅವನಿಗೆ ಸುಲಭವಾಗಿರುತ್ತದೆ.[11]

ನಿಂದೆ ಸಂಕಟಗಳು ಬರುವಾಗ "*ನಿನ್ನ ಪ್ರತಿಕ್ರಿಯೆ ಏನು*"? ಒಂದು ವೇಳೆ ನೀನು ತೆಳು ನೆಲದಂತಿರುವ ಕ್ರೈಸ್ತನಾಗಿದ್ದರೆ, ನಿನ್ನ ಜೀವಿತವನ್ನು ಹಸನು ಮಾಡಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವಂತಾಗಲಿ ಎಂಬುದು ನನ್ನ ಪ್ರಾರ್ಥನೆ.

**ಮುಳ್ಳಿನ ನೆಲ: ವಿಭಜನೆಯ ಹೃದಯ**[12]

ಈ ಮುಳ್ಳಿನ ನೆಲದ ಬಗ್ಗೆ ಕುರಿತು, ಈ ವಿಧದ ಮಣ್ಣಿನ ಕುರಿತು ಯೇಸು ಈ ಮುಂದಿನ ವಿವರಣೆಯನ್ನು ನೀಡಿರುವನು: "ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ; ಇವನೇ ಮುಳ್ಳು ಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವನು" (ಮತ್ತಾಯ 13:22).

ಇದು ನನಗೆ, ಈ ಸಾಮ್ಯದಲ್ಲಿರುವ ಬಹು ದುಃಖಕರವಾದ ಸಂಗತಿಯಾಗಿದೆ. ಆ ನೆಲ ಫಲವತ್ತಾಗಿಯೂ, ಹಾಗೂ ಹಸನಾಗಿಯೂ ಇದ್ದು ಅವನು ಬಹು ಆಸಕ್ತಿಕರವಾಗಿದ್ದಾನೆ. ಅವನು ಕಠಿಣವೂ ಅಲ್ಲ, ತೆಳುವಾದ ಮಣ್ಣಿನಂತೆಯೂ ಇರುವದಿಲ್ಲ; ಅವನು ಸುಗುಣದಲ್ಲೂ, ವ್ಯಕ್ತಿತ್ವದಲ್ಲೂ ಶ್ರೀಮಂತನಾಗಿದ್ದಾನೆ. ಅವನು ದೇವರಲ್ಲಿ ಫಲನೀಡ ಬಹುದಾದ ಸಾಮರ್ಥ್ಯವನ್ನು ಹೊಂದಿದ್ದಾನೆ. ಆದರೆ ಅವನ ಹೃದಯವು ಲೋಕದ "ಮುಳ್ಳುಗಳಿಂದ" ತುಂಬಲ್ಪಟ್ಟಿದೆ. ಒಂದು ವೇಳೆ ನಾನು ಚಿಕ್ಕವನಿದ್ದಾಗ ಮಾಡಿದಂತೆ, "ನೆಲದ ಮೇಲ್ಭಾಗವನ್ನು ಮಾತ್ರ ಕೆತ್ತಿರಬಹುದು," ಅವು ನೆಲದ ಮೇಲೆ ಕಾಣಿಸುವದಿಲ್ಲ - ಅವನ ಹೃದಯದಲ್ಲಿ ಲೋಕ ದಲ್ಲಿರುವ ಮುಳ್ಳಿನ ಅನ್ಯೋನ್ಯತೆಯು ನೆಲಸಿರುತ್ತದೆ.

ಇಂಥವನು ಕ್ರೈಸ್ತನಾಗುವಾಗ, ಅವನಲ್ಲಿ ನಿಜವಾದ ಪರಿವರ್ತನೆಯನ್ನು ಕಾಣುತ್ತೇವೆ. ಆದರೆ ಅವನು ಕ್ರಿಸ್ತನಿಗೆ ಪ್ರಾಮುಖ್ಯತೆ ನೀಡುವ ಬದಲು (ಮತ್ತಾಯ 6:33), ಪ್ರಪಂಚದ ಚಿಂತೆಯಿಂದ (ಮತ್ತಾಯ 13:22; KJV), "ಐಶ್ವರ್ಯದಿಂದಾಗುವ ಮೋಸಕ್ಕೆ" (ಲೂಕ 8:14), "ಲೌಕಿಕ ಆಶೆಗೆ ಒಳಗಾಗಿದ್ದಾನೆ" (ಮಾರ್ಕ 4:19; KJV). ನೆಲ ಅವನಿಗೆ ಎಷ್ಟು ಸಹಾಯ ಮಾಡುತ್ತದೋ, ಅವನ ಹೃದಯವು ಅದಕ್ಕೆ ತಕ್ಕಂತೆ ಇರುತ್ತದೆ (ಮತ್ತಾಯ 6:24ಬಿ) - ದೇವರನ್ನು ಐಶ್ವರ್ಯವನ್ನು ಒಟ್ಟಾಗಿ ಸೇವಿಸುವದು ಅಸಾಧ್ಯ.

ಅವನ ಈ ವಿಧವಾದ ಸ್ವಭಾವದ ನಿಮಿತ್ತ, ಅವನಲ್ಲದ ವಾಕ್ಯಕ್ಕೆ ತಡೆಯುಂಟಾಯಿತು. ಅದು ಸಾಯಲು ಇಲ್ಲ, ನಾಶವಾಗಲೂ ಇಲ್ಲ, ಆದರೆ ಅದಕ್ಕೆ ತಡೆಯು ಉಂಟಾಯಿತು. ಆ ಗಿಡಗಳ ಸ್ವಾದವನ್ನು ಆ ಮುಳ್ಳುಗಳು ಅಡಗಿಸಿದ್ದಂತೆ, ಅವನಲ್ಲಿರುವ ಆತ್ಮೀಕ ಜೀವಿತವು ಕುಂದಿ ಹೋಗಿರುತ್ತದೆ. ಅವನಲ್ಲಿರುವ ಸಾಮರ್ಥ್ಯದ ಮೂಲಕ, ಅವನು ಒಬ್ಬ ಉತ್ತಮವಾದ ಕ್ರೈಸ್ತನಾಗಿರಬಹುದಿತ್ತು, ಆದರೆ ದೊಡ್ಡ ರಾಜಕೀಯ ವ್ಯಕ್ತಿ ಅಥವಾ ದೊಡ್ಡ ವ್ಯಾಪಾರಸ್ತನಾಗ ಬೇಕು ಎಂಬ ಬಯಕೆಯಿಂದ ಅವನು ಸೋಲುತ್ತಾನೆ.

ಅದರ ಪರಿಣಾಮವಾಗಿ ಅವನು ಫಲಹೀನನಾಗಿದ್ದಾನೆ. "ಅವನು ಫಲವನ್ನು ಮಾಗಿಸುವದಿಲ್ಲ" (ಲೂಕ 8:14). ಟೊಳ್ಳಾಗಿರುವ ಬೀಜವು ಬೀಜದಂತೆ ಕಂಡಂತೆ, ಇವನು ಕ್ರೈಸ್ತನಂತೆ ಕಾಣಿಸುತ್ತಾನೆ ಆದರೆ, ಅಂತರಾಳದಲ್ಲಿ ಅವನು ಟೊಳ್ಳಾಗಿದ್ದಾನೆ. ಅವನಲ್ಲಿ ಕ್ರಿಸ್ತನಿಗಾಗಿ ಫಲ ಬಿಡುವದಿಲ್ಲ.[13] ಅಂತಿಮವಾಗಿ ಅವನು ಲೋಕವನ್ನು ಸಂಪಾದಿಸಿಕೊಂಡರೂ ತನ್ನ ಆತ್ಮವನ್ನು ನಷ್ಟ ಪಡಿಸಿಕೊಂಡಿದ್ದಾನೆ (ಮಾರ್ಕ 8:36).

ಇಂಥಹ ವಿಧವಾದ ತಡೆಗಳು ನಮ್ಮ ಆತ್ಮೀಕ ಜೀವಿತದಲ್ಲಿ ಉದ್ಭವಿಸಿದೆಯಾ ಎಂದು ಪರಿಕ್ಷಿಸಿಕೊಳ್ಳುವ ಸಮಯವು ಇದಾಗಿದೆಯಲ್ಲವೇ?

(1) *ಲೋಕದ ಚಿಂತೆಗಳು.* ನಮ್ಮನ್ನು ದೇವರಿಗೆ ಹೃದಯ ಪೂರ್ವಕವಾಗಿ ಒಪ್ಪಿಸಿಕೊಡುವದರ ವಿಚಾರದಲ್ಲಿ, ಇಂಥಹ ಲೆಕ್ಕಕಿಲ್ಲದ ಸಂಗತಿಗಳು ತಡೆಯಾಗಿವೆಯೇ? ಮಾರ್ಥಳ ಹಾಗೆ, "ಅನೇಕ ಸಂಗತಿಗಳಲ್ಲಿ ಮುಳುಗಿ" (ಲೂಕ 10:41) ಅಗತ್ಯವಾದದ್ದನ್ನು "ಮರೆತ್ತಿದ್ದೇವೋ" (ಲೂಕ 10:41, 42)?

(2) *ಮೋಸಕರವಾದ ಐಶ್ವರ್ಯ.* ಐಶ್ವರ್ಯದ ಸಂಪಾದನೆಯ ನಿಮಿತ್ತ ಮೋಸಕ್ಕೆ ಒಳಗಾಗುವದು ನಮ್ಮ ಉದ್ದೇಶವಾಗಿದೆಯೇ? ಅವುಗಳ ಅಗತ್ಯ ನಮಗೆ ಅಲ್ಪವಾಗಿದೆ - ಅದು ತಾತ್ಕಲಿಕ ಅಗತ್ಯವಷ್ಟೆ. ಇವುಗಳ ಮಧ್ಯದಲ್ಲಿ ನುಸುಳಿ ಹೋಗುವಾಗ, ಜೀವನಕ್ಕೆ ಅತಿ ಅಗತ್ಯವಿರುವ ಸಂಗತಿಗಳನ್ನು ಮರೆಯದೆ ಇರೋಣ.

(3) *ಸುಖ ಮತ್ತು ಆಶೆಗಳು.* ಪ್ರಾಪಂಚಿಕತೆಯು ನಮ್ಮ ಆತ್ಮೀಕ ಜೀವಿತವನ್ನು ಮೊಟಕುಗೊಳಿಸುತ್ತಿದೆಯೇ? ಪ್ರಪಂಚವು ನಮ್ಮ ಹೃದಯಗಳಲ್ಲಿ ಮನೆ ಮಾಡಿದೆಯೇ? ದೇವರಿಗೂ ಮನುಷ್ಯರಿಗೂ ಸೇವೆ ಮಾಡುವ ಬದಲು; "ತಮಾಷೆ ಮಾಡುತ್ತಾ" ಕಾಲಹರಣ ಮಾಡುತ್ತಿರುವಿರಾ?

ನಮ್ಮಲ್ಲಿ ಅನೇಕರು ವಿಭಜನೆ ಹೊಂದಿದ ಜೀವಿತದಲ್ಲಿದ್ದೇವೆ. ದೇವರ ಪ್ರಯೋಜನಕ್ಕಾಗಿ ನಾವುಗಳು ತಲಾಂತುಗಳನ್ನು ಮತ್ತು ಸಾಮರ್ಥ್ಯವನ್ನು ಹೊಂದಿದ್ದರೂ, ದೇವರ ಮೇಲಿನ ಪ್ರೀತಿಯ ಹೊರತಾಗಿ, ಇತರೆ ಸಂಗತಿಗಳಲ್ಲಿ ಆಸಕ್ತಿ ಹೊಂದಿರುವಿರಾ. ನಮ್ಮ ಲಕ್ಷವು ಆತನ ಮೇಲಿರಲಿ, "ನಿರ್ಮಲ ಚಿತ್ತರು ಧನ್ಯರು" (ಮತ್ತಾಯ 5:8ಎ) ಎಂದು ಯೇಸು ಹೇಳಿರುವನು. ಪೌಲನು ಸಹ ಬರೆದು, "ಆದಕಾರಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವುಗಳನ್ನೇ ಹುಡುಕಿರಿ; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ಮೇಲಿರುವಂಥವುಗಳ ಮೇಲೆ ಮನಸ್ಸಿಡಿರಿ, ಭೂಸಂಬಂಧವಾದವುಗಳ ಮೇಲೆ ಇಡಬೇಡಿರಿ" (ಕೊಲಸ್ಸೆ 3:1, 2).

**ಒಳ್ಳೆಯ ನೆಲ: ಯಥಾರ್ಥ ಹಾಗೂ ಒಳ್ಳೆಯ ಹೃದಯ**

ಹೇಗೂ ಈಗ "ಒಳ್ಳೆಯ ನೆಲದ," ಬಳಿ ಈಗ ಬಂದಿದ್ದೇವೆ. ಯೇಸು ಇದನ್ನು "ಸುಗುಣವುಳ್ಳ ಒಳ್ಳೆಯ ಹೃದಯಕ್ಕೆ" ಹೋಲಿಸಿರುವನು (ಲೂಕ 8:15). ಅವರ ಹೃದಯಗಳು ಕಠಿಣವಲ್ಲ, ತೆಳುವಾಗಿಯಾಗಲೀ ಅಥವಾ ವಿಭಜನೆಯನ್ನು ಸಹ ಹೊಂದಿರುವದಿಲ್ಲ. ಅವರು "ವಾಕ್ಯವನ್ನು ಕೇಳಿ, ಕೈಕೊಳ್ಳುತ್ತಾರೆ" (ಮಾರ್ಕ 4:20). ವಾಕ್ಯವನ್ನು "ಅರ್ಥಮಾಡಿಕೊಳ್ಳಲು" ಪ್ರಯತ್ನಿಸುತ್ತಾರೆ (ಮತ್ತಾಯ 13:23). ವಾಕ್ಯ ಕೇಳಿದ "ತಕ್ಷಣ ಅದನ್ನು ಹಿಡಿದುಕೊಳ್ಳುವರು" (ಲೂಕ 8:15). ಕೀರ್ತನೆಗಾರನು ಹೇಳಿದಂತೆ: "ಅವರು ಧರ್ಮಶಾಸ್ತ್ರದಲ್ಲಿ ಆನಂದ ಪಡುವವರೇ" (ಕೀರ್ತನೆ 1:2).

ಇಂಥಹ ಹೃದಯದಲ್ಲಿ ವಾಕ್ಯದ ಬೀಜವು ಮೊಳೆತು, "ಅಭಿವೃದ್ಧಿ ಹೊಂದಿ, ಫಲವನ್ನು ನೀಡುತ್ತದೆ. ಇವನು ಫಲವಂತನಾಗಿ, ನೂರರಷ್ಟು, ಅರವತ್ತರಷ್ಟು, ಮೂವತ್ತರಷ್ಟು ಫಲವನ್ನು ಕೊಡುತ್ತಾನೆ" (ಮತ್ತಾಯ 13:23). ವಿವಿಧ ನೆಲಗಳು, ವಿವಿಧ ಸಾಮರ್ಥ್ಯವನ್ನ ಹೊಂದಿದ್ದರೂ, ಅದರ ಇಳುವರಿಯಲ್ಲಿ ಏರು ಪೇರು ಇರುತ್ತದೆ - ಅವು ಶೇಕಡ ನೂರು, ಅರವತ್ತು, ಮೂವತ್ತು ಅದು ಒಳ್ಳೆಯ ಬೆಳವಣಿಗೆಯಾಗಿದೆ. ಬೀಜವನ್ನು ಬಿತ್ತುವವನ ಪ್ರಯಾಸದ ಫಲವಾಗಿದೆ. ಕ್ರೈಸ್ತನು ತನ್ನ ಜೀವಿತದಲ್ಲಿ ಆತ್ಮೀಕ ಫಲವನ್ನು ನೀಡಬೇಕು!

ಈಗ ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳೋಣ. "ನನ್ನಲ್ಲಿ ಸುಗುಣವುಳ್ಳ ಯಥಾರ್ಥ ಹೃದಯವಿದೆಯೇ? ಆಶೆಯಿಂದ ವಾಕ್ಯವನ್ನು ಸ್ವೀಕರಿಸಿರುವೆನೋ? ಪ್ರತಿ ಹೆಜ್ಜೆಯಲ್ಲೂ ಆತನ ವಾಕ್ಯಕ್ಕೆ ವಿಧೇಯನಾಗಿರುವೆನೋ?"

"ಫಲದ ಪರೀಕ್ಷೆ" ಯಿಂದ ಈ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಬಹುದು. ಅವರ "ಫಲಗಳಿಂದ ಅವರನ್ನು ಅರಿಯುವಿರಿ" (ಮತ್ತಾಯ 7:16ಎ) ಎಂದು ಯೇಸು ಹೇಳಿರುವನು.

ನಮ್ಮ ಜೀವಿತದಲ್ಲಿ ಫಲವಿದೆಯೇ? ದೇವರು ನಮ್ಮ ಜೀವಿತದಲ್ಲಿ ಫಲ ಕಾಣುವಂತೆ, ದೇವರ ಮಕ್ಕಳಾಗಿದ್ದೇವಾ?[14] ಕ್ರಿಸ್ತನ ಮಾತಿನಂತೆ, "ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು. ಮತ್ತು ನನ್ನ ಶಿಷ್ಯರಾಗುವಿರಿ" (ಯೋಹಾನ 15:8). ಪೌಲನು ಸಹ, "ಕ್ರಿಸ್ತನೊಂದಿಗೆ ಸೇರಿ, ದೇವರಿಗೆ ಫಲವಾದಿರಿ" (ರೋಮಾಪುರ 7:4). "ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ಆತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷಪಡಿಸುವವರಾಗಿರಬೇಕೆಂತಲೂ ನೀವು ಸಲಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ದೇವಜ್ಞಾನದಿಂದ" (ಕೊಲಸ್ಸೆ 1:10).

"ಫಲ ನೀಡು" ಎಂಬ ಅರ್ಥ ಯಾವಾಗ ಉಂಟಾಗುತ್ತದೆ? ಫಲ ಅಂದರೆ "ಪರಿಣಾಮ"[15] ವಾಕ್ಯದ ಅಪೇಕ್ಷೆಯ "ಫಲ" ನಮ್ಮಲ್ಲಿರುತ್ತದೆ, ನಮ್ಮ ಜೀವಿತದಲ್ಲಿರು ಪರಿಣಾಮವನ್ನು ಜನರು ನೋಡಬಹುದಾಗಿದೆ. ಯೇಸುವಿನ ಸ್ವಭಾವದ ಪ್ರತಿಬಿಂಬ ನಮ್ಮಲ್ಲಿ ಕಾಣುವಾಗ ಸುವಾರ್ತನೆಯ *ಫಲ* ನಮ್ಮಲ್ಲಿರುತ್ತದೆ. ಇತರರಿಗೆ ಸಹಾಯಮಾಡಿ, ಕರುಣೆ ತೋರುವುದು ನಮ್ಮಲ್ಲಿರುವ "ಪ್ರತಿಫಲ" ವಾಗಿದೆ. ನಮ್ಮ ಆರಾಧನೆಯಲ್ಲಿ ಹೆಚ್ಚು ಆಸಕ್ತಿವಹಿಸುವದರಿಂದ, ಆತ್ಮಿಕ ಅಭಿವೃದ್ಧಿಯ ಫಲಕಾಣಿಸುತ್ತದೆ ಸುವಾರ್ತೆಯನ್ನು ಸಾರಿ ಇತರರನ್ನು ಕರ್ತನ ಬಳಿಗೆ ನೆಡೆಸುವಂಥದ್ದು ಫಲವಾಗಿದೆ.[16]

ಕ್ರಿಸ್ತನ ಮಾತುಗಳನ್ನು ಪುನಃ ಹೇಳುತ್ತೇವೆ: "ಕಿವಿಯುಳ್ಳವನು ಕೇಳಲಿ" (ಮತ್ತಾಯ 13:9). ಇದು ಒಂದು ಅರ್ಥಮಾಡಿಕೊಳ್ಳುವ ಕರೆ ಹಾಗೂ ಈ ಪಾಠದ ಸಾರಾಂಶವೂ ಆಗಿದೆ: ಕ್ರಿಸ್ತನ ಮಾತನ್ನು ಅಂಗೀಕರಿಸಿ, ಆತನ ಆಶೀರ್ವಾದಕ್ಕೆ ಪಾತ್ರನಾಗು!

## ಮುಕ್ತಾಯ

ಈ ಹಿಂದೆ ವಾಕ್ಯವನ್ನು ಹೇಗೆ ಅಂಗೀಕರಿಸಿದ್ದಿ ಎಂಬುದನ್ನು ನಾನು ಅರಿಯನು, ಯಾಕೋಬನು ವಿವರಿಸಿದ ಈ ಕೆಳಕಂಡ ವಿವರಣೆಯಂತೆ, ವಾಕ್ಯವನ್ನು ಸ್ವೀಕರಿಸಲು ನಾನು ನಿನ್ನನ್ನು ಪ್ರೋತ್ಸಾಹಿಸುತ್ತೇನೆ:

> ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ. ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ (ಯಾಕೋಬ 1:21, 22).

ನೀನು ಅರಿಯದ ಕೆಲವು ವಾಕ್ಯಗಳು ಇಲ್ಲಿವೆ:

> "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16).

> "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38).

> "ಈಗ ನೀನೇಕೆ ಸಾವಕಾಶಮಾಡುತ್ತಿ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅಪೊಸ್ತಲರ ಕೃತ್ಯಗಳು 22:16).

"... ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಲೆಯನ್ನು ಕೊಡುವೆನು" (ಪ್ರಕಟನೆ 2:10).[17]

ನೀನು ಈ ವಾಕ್ಯಗಳನ್ನು ಕೇಳಿ, ಅಂಗೀಕರಿಸಿ, ಅರ್ಥಮಾಡಿಕೊಂಡು, ಅದಕ್ಕೆ ವಿಧೇಯನಾಗಿ ನಿನ್ನ ಹೃದಯದಲ್ಲಿ ದೃಢವಾಗಿ ಇಟ್ಟುಕೊಳ್ಳಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ!

---

## ಮಾಹಿತಿ

ಈ ಪಾಠದ ಸಂದೇಶವು ಸರಳವಾಗಿದ್ದರೂ, ಪ್ರಬುದ್ಧವಾಗಿದೆ, ಬಿತ್ತುವವನ ಸಾಮ್ಯದ ಅರ್ಥವನ್ನು ನಾವುಗಳು ಆಗಾಗ್ಗೆ ಮನನ ಮಾಡಬೇಕು.


ಈ ಚಿತ್ರಪಟದಲ್ಲಿ ನಮ್ಮ ಕೇಳುಗರು ಹೊಂದಿರುವ ವಿವಿಧ ಹೃದಯಗಳ ಕುರಿತ ಚಿತ್ರಣವನ್ನು ವಿವರಿಸಿದೆ.

---

ಟಿಪ್ಪಣಿಗಳು

[1]ತನ್ನ ಹಿಂದಿನ ಟಿಪ್ಪಣಿಗಳನ್ನು ನೆನಪಿನಲ್ಲಿಟ್ಟಿರುವದಿಲ್ಲ. ಮಾರ್ಕ ಗಾರ್ವೆಯವನ "ಫೋರ್‌ಟೋಲ್ಡ್ ಗಾಸ್ಪಲ್"ನಿಂದ ಸಂಪನ್ಮೂಲ ಪಡೆಯಲಾಗಿದೆ. McGarvey's *Fourfold Gospel* ಫ್ಲಾನಲ್ ಗ್ರಾಫ್‌ನಿಂದ ದೃಷ್ಟಾಂತವನ್ನು ನೀಡಿರು ವೆನು. ಗೌರವವನ್ನು ಎಲ್ಲಿ ನೀಡಬೇಕೋ, ಅಲ್ಲಿ ನೀಡಿರುವದಿಲ್ಲ. ಆದ್ದರಿಂದ ಕ್ಷಮೆಯಿರಲಿ. [2]KJV ದಾರಿಯ ಮಗ್ಗುಲು NASB ಹಾದಿಯ ಬದಿ. [3]ವಿವಿಧ ನೆಲದ ಬಗ್ಗೆ ವಿವರಣೆ ನೀಡಬಹುದು. [4]ಕಲ್ಲಿನಿಂದ ತುಂಬಿದ ನೆಲ ಎನ್ನುವ ಬದಲು, ತೆಳುವಾದ ಮಣ್ಣು ಇದ್ದ ಬಂಡೆ ಎನ್ನಬಹುದು. [5]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 330. [6]ನಮ್ಮಲ್ಲಿರುವ "ಗೋದಿಯ ತೆನೆ" ಬಗ್ಗೆ ನಾನು ಮಾತಾಡಿದ್ದರೆ, ನೀವುಗಳು ನಿಮ್ಮಲ್ಲಿ ಸ್ಥಳೀಯವಾಗಿ ದೊರೆಯುವಂಥದ್ದನ್ನು ವಿವರಿಸಿ. [7]ಹೌದು ನೆಲ (ಹೃದಯ) ಬಿತ್ತುವವನಿಂದ (ಬೋಧಕನಿಂದ) ಸಿದ್ಧಗೊಳ್ಳಬೇಕು: ಇಲ್ಲಿ ನೆಲದ ಪರಿಸ್ಥಿತಿಯನ್ನು ಮಾತ್ರ ವಿವರಿಸಿದೆ. [8]Read Colossians 1:23; KJV. [9]Read Colossians 2:7. [10]McGarvey and Pendleton, 334, ಇವರಿಂದ ಈ ವಾಕ್ಯವನ್ನು ಪಡೆಯಲಾಗಿದೆ.

[11]ಸ್ಥಳೀಯವಾದ ವಿವರಣೆ ನೀಡಿರಿ. [12]ಗೊಂದಲಕ್ಕೆ ಒಳಗಾದ ಹೃದಯ. [13]"ಪ್ರತಿಫಲ" ಹೆಚ್ಚಾಗಿ ವಿವರಿಸಿರಿ. [14]ಗಿಡಗಳ ಉದಾಹರಣೆ ನೀಡಿರಿ. ನಾನು ಏಳು ಪೆಕಾನ್ ಮರಗಳನ್ನು ಹೊಂದಿರುವೆನು. ಚಿಕ್ಕದಾದ ಎರಡುಗಿಡಗಳಿಂದ ಪೆಕಾನ್‌ನನ್ನು ನಾನು ಬಯಸಲಿಲ್ಲ. ಆದರೆ ಈ ವರ್ಷ ಅದರಲ್ಲಿ ಫಲದ ಆರಂಭವಾಗಿದೆ (ಅವು ಫಲಕೊಡದಿದ್ದಲ್ಲಿ ಕತ್ತರಿಸಿ ಹಾಕುತ್ತಿದೆ). [15]ಹೆರಿಟೇಜ್ ಡಿಕ್ಷನರಿ. [16]ಸ್ಥಳೀಯ ವ್ಯಾಖ್ಯಾನ ಬಳಸಿರಿ. [17]ಬಿದ್ದುಹೋಗಿ, ಪುನ ಸ್ಥಾಪನೆಗೊಂಡ ಕ್ರೈಸ್ತರ ಬಗ್ಗೆ ವಿವರಿಸಿ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16; 1 ಯೋಹಾನ 1:9).


“ಕೇಳಿರಿ ... ಬಿತ್ತುವವನ ಸಾಮ್ಯ” - ಮತ್ತಾಯ 13:18
ಸೈತಾನ
ಬೋಧಕ
ಸಂಕಟಗಳು
ದಾರಿಯ ಬದಿಯಲ್ಲಿ: ಕಠಿಣವಾದ ಹೃದಯ
ಬಂಡೆಯ ನೆಲ: ತೆಳುವಾದ ಹೃದಯ
ಐಶ್ವರ್ಯ
ಆಶೆ
ಚಿಂತೆ
ದುರಾಶೆ
30
60
100
ವಾಕ್ಯ
ಮುಳ್ಳಿನ ನೆಲ: ವಿಭಜನೆಯ ಹೃದಯ
ಒಳ್ಳೆಯ ನೆಲ: ಸುಗುಣವಾದ ಹೃದಯ
ಯಾವ ವಿಧವಾದ ಹೃದಯ ನಿನ್ನದಾಗಿದೆ?